ವಿಶಿಷ್ಟವಾಗಿದ್ದು ಅವರು ಏನನ್ನೋ ಮರೆಮಾಚಲು ಹವಣಿಸುವಂತೆ ನನಗೆ ಕಾಣಿಸಿತು. 'ಸಾರ್... ತಾವು ದಯವಿಟ್ಟು ಯಥಾರ್ಥವನ್ನು ತಿಳಿಸಿ. ಏನನ್ನೂ ದಯವಿಟ್ಟು ಮರೆಮಾಚಬೇಡಿ. ಅದು ಎಷ್ಟೇ ಕಟು ಸತ್ಯವಾಗಿದ್ದರೂ ಚಿಂತೆಯಿಲ್ಲ...' ಎಂದು ನಾನೇ ಬಾಯಿಬಿಟ್ಟು ನಿವೇದಿಸಿಕೊಂಡೆ. ಸಿಂಗ್ ಅವರು ಒಂದು ದೀರ್ಘಶ್ವಾಸದೊಂದಿಗೆ, ಕುರ್ಚಿಯಿಂದ ಮೇಲೆದ್ದು ಬಂದು ನನ್ನ ಪಕ್ಕನಿಂತು, ನನ್ನ ಬೆನ್ನ ಮೇಲೆ ಕೈಯ್ಯಾಡಿಸುತ್ತಾ 'ನೋಡಿ... ನಾನು ನಿಮಗೆ ಯಥಾರ್ಥವನ್ನು ಹೇಳಲೇಬೇಕಾಗಿದೆ... ನಿಮಗೆ ಎಷ್ಟು ಮಕ್ಕಳಿವೆ?' ಎಂದರು. ನನ್ನ ಮಕ್ಕಳ ಸಂಖ್ಯೆಗೂ ನನ್ನ ರೋಗಕ್ಕೂ ಯಾವ ಸಂಬಂಧವೋ? – 'ಎರಡು ಗಂಡು ಮಕ್ಕಳಿದ್ದಾರೆ ಸಾರ್... ದೊಡ್ಡ ಹುಡುಗ ಏಳು ವರ್ಷದೋನು. ಚಿಕ್ಕವನು ನಾಲ್ಕು... ಆ ಮೇಲೆ ನಾನೇ ಆಪರೇಷನ್ ಮಾಡಿಸಿಕೊಂಡುಬಿಟ್ಟೆ. ಯಾಕೆ ಸಾರ್?' ಎಂದು ಕಾತರನಾಗಿ ಕೇಳಿದೆ. ಸಿಂಗ್ ಅವರ ಮುಖದಲ್ಲಿ ಕ್ಷಣಕ್ಷಣಕ್ಕೂ ಗಾಂಭೀರ್ಯದ ಛಾಯೆ ಗಾಢವಾಗುತ್ತಾ ಹೋಯಿತು– 'ನೋಡಿ... ನಾನೀಗ ಹೇಳ್ತಾ ಇರೋದು ತುಂಬಾ ಗಂಭೀರವಾದ ಸತ್ಯ... ನಿಮಗೆ ಇದನ್ನು ತಡೆಯೋ ಶಕ್ತಿ ಇದೆಯೋ ಇಲ್ಲವೋ ಅನ್ನೋದನ್ನ ಸಹ ಯೋಚನೆ ಮಾಡದೆ ನಾನು ಇದರ ಬಗ್ಗೆ ನಿಮ್ಮ ಹತ್ತಿರ ಬಾಯಿ ಬಿಡಬಾರದಾಗಿತ್ತು... ಆದರೆ ಈಗಾಗಲೇ ಹೇಳಿಬಿಟ್ಟಿದೀನಿ. ಇನ್ನು ಮುಚ್ಚಿಡಬೇಕಾದ್ದು ಏನೂ ಇಲ್ಲ... ನಿಮ್ಮ ಸಂಬಳ ಎಷ್ಟು ಕೇಳಬಹುದೆ?' ಸಿಂಗ್ ಅವರು ಯಾವ ವಿಷಮಸತ್ಯವನ್ನು ಬಿತ್ತರಿಸುವ ಸಲುವಾಗಿ ಇಷ್ಟೆಲ್ಲ ಪೀಠಿಕೆ ಹಾಕುತ್ತಿದ್ದಾರೆಂಬ ಅಂದಾಜು ನನಗಾಗಲಿಲ್ಲ. ಆದರೆ ವೈದ್ಯರು ಯಾವ ವಿಷಯವಾಗಿ ಪ್ರಶ್ನಿಸಿದರೂ ಅದಕ್ಕೆ ಮರೆಮಾಚದೆ ಉತ್ತರಿಸಬೇಕೆಂಬ ನಂಬುಗೆ ನನ್ನದಾಗಿತ್ತು– 'ತಿಂಗಳಿಗೆ ಒಂಬೈನೂರಾ ಅರವತ್ತು' ಎಂಬ ಉತ್ತರ ತಟ್ಟನೆ ನನ್ನ ಬಾಯಿಂದ ಹೊರಬಿತ್ತು.

'ವೆರಿಗುಡ್... ಇಟ್ ಈಸ್ ಎ ಹ್ಯಾಂಡ್‌ಸಮ್ ಅಮೌಂಟ್– ಇಲ್ನೋಡಿ– ಇನ್ನು ಎರಡು ತಿಂಗಳು ಈ ನಿಮ್ಮ ಸಂಬಳದಲ್ಲಿ ನಿಮಗೆ ಏನೇನು ಸುಖ ಬೇಕೆಂಬ ಆಸೆ ಇದೆಯೋ ಎಲ್ಲ ಮುಗಿಸಿಕೊಳ್ಳಿ... ಯಾವುದಕ್ಕೂ ಹಿಂಜರಿಯಬೇಡಿ... ನಿಮಗೆ ಯಾವ ಊಟಬೇಕೋ, ಯಾವ ತಿಂಡಿ ಬೇಕೋ, ಯಾವ ಪಾನೀಯಗಳು ಇಷ್ಟವೋ ಎಲ್ಲವನ್ನೂ ಯಥೇಚ್ಛವಾಗಿ ಸೇವಿಸಿ, ಹೆಣ್ಣಿನ ಹಂಬಲ ನಿಮಗಿದ್ದಲ್ಲಿ ಅದಕ್ಕೂ ಮುಜುಗರ ಪಟ್ಟುಕೊಳ್ಳಬೇಡಿ... ಎಲ್ಲವನ್ನೂ ಅನುಭವಿಸಿ ಬಿಡಿ– ಮಿಸ್ಟರ್... ರವರೇ... ನೀವೀಗ ಸ್ಥೈರ್ಯದಿಂದ ಇರಬೇಕು... ಯಾಕೇಂದ್ರೆ... ಯಾಕೆಂದರೆ ನೀವು ಈ ಇಹದಲ್ಲಿ ಬಾಳಲು ಉಳಿದುರುವ ಅವಕಾಶ ಕೇವಲ ಇನ್ನೆರಡೇ ತಿಂಗಳು... ಐಯಾಮ್ ಸಾರಿ, ಮೈಡಿಯರ್ ಯಂಗ್‌ಮ್ಯಾನ್... ಪ್ಲೀಸ್ ಬಿ ಬೋಲ್ಡ್...' –ಎನ್ನುತ್ತ ನನ್ನ ಭುಜಗಳನ್ನು ಚಪ್ಪರಿಸಿ, ಬೆನ್ನ ಮೇಲೆ ಕೈಯಾಡಿಸತೊಡಗಿದರು ಸಿಂಗ್–ಅವರ ತೀರ್ಮಾನವನ್ನು ಕೇಳುತ್ತಲೇ ನನ್ನ ಜಂಘಾಬಲ ಉಡುಗಿದಂತಾಯಿತು. ಬೆನ್ನ ಮೇಲಾಡುತ್ತಿದ್ದ ಅವರ ಕೈ, ಯಾವುದೋ ಭಯಂಕರ ಘಟಸರ್ಪದ ಹೆಡೆಯಂತೆ ಭಾಸವಾಯಿತು– ಮೈಯ ನರನಾಡಿಗಳೆಲ್ಲ ವೇಗವಾಗಿ ಬಡಿದುಕೊಳ್ಳತೊಡಗಿದವು. ಮುಖದಲ್ಲಿದ್ದ ರಕ್ತವೆಲ್ಲ ಬಸಿದು ಹೋದಂತಹ ಅನುಭವ!– ಅಪ್ರಯತ್ನವಾಗಿ ನನ್ನ ತಲೆ ಟೇಬಲ್ಲಿಗೊರಗಿತು. ಆಲೋಚಿಸುವ ಶಕ್ತಿಯೇ ಲುಪ್ತವಾದಂತಾಗಿ, ನನ್ನ ಅಸ್ತಿತ್ವವೆಲ್ಲ ಶೂನ್ಯದ ಪ್ರತಿರೂಪವೆನ್ನಿಸತೊಡಗಿತು. ಯಾವುದೋ ಮಂಪರು ನನ್ನ ಬುದ್ಧಿ, ಮನಸ್ಸು, ಚಿತ್ತ, ಅಹಂಕಾರಗಳ ಮೇಲೆಲ್ಲ ಕವಿಯತೊಡಗಿತು– ಈ ನನ್ನ ಪಂಚಭೂತಾತ್ಮಕ ಶರೀರದ ಯಾವ ಭಾಗ 'ನಾನು–ನಾನು–ನಾನು' ಎಂಬ ಈ ಅಹಂಕಾರದ ಕಲ್ಪನೆಯನ್ನು ಬೆಳೆಸಿಕೊಂಡಿತ್ತೋ ಆ ಇಡೀ ಭಾಗವೇ ಇದೀಗ ಪ್ರಜ್ಞಾಶೂನ್ಯವಾಗತೊಡಗಿತು. ಡಾ|| ಸಿಂಗ್